
# ಅರಳುವ ಗರಿಗರಿ ಕನಸು



ಮರ ಹೇಳಿಕೊಡುತ್ತಿದೆ ಚಿಗುರೆಲೆಗೆ
ಗಾಳಿಯಲೆಗೆ ಅಲುಗಿ ಪಟಗುಡುತ
ಬದುಕುವುದು, ಪುಷ್ಪಪಾತ್ರೆಯ
ತೆರೆಯುವುದು, ಹೂದುಂಬಿ
ಮೈಮರೆವುದು, ತೂಗಿದ ಕಾಯ
ಮಾಗುವುದು, ಮಾಗಿದ ಹಣ್ಣ ಕುಕ್ಕಿ
ತಿನ್ನುವುದು , ತಿಂದ ಹಕ್ಕಿ ಹಿಕ್ಕೆ
ಒಟ್ಟುವುದು, ಹಿಕ್ಕೆಯಲ್ಲಿ ಬಿತ್ತ
ಚಿಗುರೊಡೆವಾಗ ಅರಳಿ ಅರಳಿ
ಹೊಸ ಎಲೆಗೆ ಒಣಎಲೆ ಸರಿದು
ತಾವಿಡುವ ತವಕ, ಒಣ ಮೈಯ
ಅದರುತ್ತಾ ಗಾಳಿ ಮೈಸವರುತ್ತ
ತಾಯಪಾದ ಸೇರುವುದು.

ಚೂರಾದ ಮೈಯ್ಯಿ ಮಣ್ಣ
ಸೇರುವುದು, ಮಳೆಹನಿಗೆ ಮೈಯ್ಯೊಡ್ಡಿ
ದಿನಬೆಳಗು ಕಾಣುತ್ತಿದ್ದ ನೀಲಿಕನಸ
ಕಾಣುತ್ತ ಮುಗಿಲಿಗೇರುವ ಕನಸ
ಎದೆಗಿಳಿಸಿ ಕಣ್ಮರೆಯಾಗುವುದು

ಮರಕ್ಕೀಗ ಹತ್ತುಹಕ್ಕಿಯ ರೆಕ್ಕೆ,
ಬಣ್ಣದ ಕನಸು, ಎಳೆಎಲೆಯ ತೊಟ್ಟಿಲು
ಗಾಳಿ ಉಸಿರಿಗೆ ತೂಗುತಿಹುದು
ನೀರಲೆಯ ಮೇಲೆ ಉದುರಿದ ಎಲೆ
ನಾವೆಯಾಗಿ ತೇಲಿ ದೂರ ಸಾಗುವುದ ಕಂಡು
ಮರಿಮೀನ ಗುಂಪು ಹಿಡಿಯಲು ಹಿಂದೆಯೇ
ಹಿರಿಹಿಗ್ಗಿ ಚಲಿಸುವುದ ಕಂಡು ಸೂರ್ಯ ನಗುತ
ಬೆಳಕಿನ ಕಿರಣದ ಪುಳಕವನ್ನೆಬ್ಬಿಸುತಿಹನು
ಹಿಂದೆಹಿಂದೆಯೇ ....

ಗರಿಕೆ ಹುಲ್ಲಿನ ಇಬ್ಬನಿ ಕಣ್ತುಂಬಿ ಕರಗುತಿಹುದು.
ಇದ ಕಂಡು ದಡದ ಕಪ್ಪೆಯೊಂದು ಪಟಪಟನೆ
ಹಾರುತಿಹುದು ನೀರುನೆಲದ ಸುತ್ತಮುತ್ತ
ತಂಗಾಳಿಯ ತೆರೆಗೆ....ಹುಲ್ಲ ಮರೆಗೆ!
ಆಹಾ.... ನೀರೇ , ಆಹಾ..... ಬೆಳಗೇ....
ನೋಡು ಚಿಗುರೆಲೆಯೇ ಗರಿಗರಿ ಕನಸ !